ವ. ಉಮೇಶ ಕಾರಂತ, ಮಂಗಳೂರು
◆ ಮಗುವಿನ ಮುಗ್ಧ ನಗುವನ್ನು ಇನ್ನೆಲ್ಲಿ ನೋಡಬಹುದು?




ಆ ಫೋಟೊವನ್ನೇ ಡಿಪಿ ಮಾಡಿಕೊಂಡಿರುವವರ ವಾಟ್ಸ್‌ಆ್ಯಪ್‌ನಲ್ಲಿ.

ರಾಜು ಎಸ್. ಗಾಲಿ, ಅಥಣಿ
◆ ದೇಶಾಭಿಮಾನ ಪ್ರತಿಯೊಬ್ಬರಿಗೂ ಇರಬೇಕು. ಆದರೆ ರಾಜಕಾರಣಿಗಳಿಗೆ ಏಕಿಲ್ಲ?
ಇದೆಯಲ್ಲ! ಪ್ರತಿ ರಾಜಕಾರಣಿಯಲ್ಲೂ ದೇಶಾಭಿಮಾನವಿದೆ, ವಿದೇಶದ್ದು.

ಗಂಜಾಂ ನಾಗರಾಜ್, ಮೈಸೂರು
◆ ಈಶ್ವರ ಪಾರ್ವತಿ ಇಬ್ಬರಿಗೂ ಮೊಮ್ಮಕ್ಕಳೇ ಆಗಲಿಲ್ಲವೇಕೆ?
ಅವರ ಮಕ್ಕಳೆಲ್ಲ ಸಾಫ್ಟ್‌ವೇರ್ ಮಂದಿಗಿಂತಲೂ ಬಿಜಿ ಆಗಿರುವುದರಿಂದ ಮಕ್ಕಳ ಬಗ್ಗೆ ಯೋಚಿಸಲು ಬಿಡುವಾಗಿಲ್ಲವಂತೆ.

ಎಂ.ಎ. ಕುಮಾರ್, ಬೆಂಗಳೂರು
◆ ಸಾವನ್ನು ಪ್ರೀತಿಯಿಂದ ಸ್ವಾಗತಿಸುವುದು ಹೇಗೆ?



ತಾಯ್ನಾಡಿನ ಗಡಿ ಕಾಯುವ ಯೋಧರಾಗುವ ಮೂಲಕ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
◆ ವಸಂತನಿಂದ ಪ್ರಾರಂಭವಾದ ಸಂತಸ ವರ್ಷಪೂರ್ತಿ ಇರುವುದಿಲ್ಲವೇಕೆ?
'ವರ್ಷ'ದಲ್ಲಿ ರಾಡಿಯಾಗಿ ಶರದೃತುವಿನಲ್ಲಿ ಪರಿತ್ಯಾಗಿಳಿಗೆ ಸಿಲುಕಿ ಶಿಶಿರದಲ್ಲಿ ಶ್ಶಿ ಶ್ಶಿ ಎನ್ನುವ ಮಟ್ಟ ತಲುಪುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
◆ ಮಾತಿಗೆ ರೂಪ ಬೇಡ, ಮನಸ್ಸಿಗೆ ಅಂದ ಬೇಡ ಅಂತಾರಲ್ಲಾ...?
ವಾಹ್! ಬೇಡನಾಗಿದ್ದ ವಾಲ್ಮೀಕಿಯೇ ಮಾತಿಗೆ ರೂಪವಿತ್ತವನು, ಆ ಋಷಿಯ ನೆನಪೇ ಮನಸ್ಸಿಗೆ ತಂಪೆಂಬ ಉತ್ಕೃಷ್ಟ ಭಾವನೆಯಿದು.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
◆ ಮೊದಲು ರವಿಕೆಯಿಂದ ಈಟೀಟೆ ಬೆನ್ನು ತೆರೆದರು; ಬಯಲಾದ ಬೆನ್ನಿಗೆ ಬಲೆ ಹೆಣೆದರು. ಈಗ ಎರಡೂ ಭುಜ ತೂತು. ಮುಂದೆ?
ಛೆ! ಹಾಗೆಲ್ಲ ರಹಸ್ಯವನ್ನು ಬಿಟ್ಟುಕೊಟ್ಟು ರಸಭಂಗ ಮಾಡಲಾರೆ.

ಭಾರತಿ ಮಾನಗೆ, ಹೊನ್ನಾವರ
◆ ಭಾರತ ಶ್ರೀಮಂತ ಜನರಿರುವ ಬಡ ರಾಷ್ಟ್ರ. ಏಕೆ?
ಹಣಕ್ಕೆ ಸೀಮಿತವಾದ ಶ್ರೀಮಂತಿಕೆ ಗುಣದಲ್ಲಿ ಇಲ್ಲದಿರುವುದರಿಂದ.

ಎ.ಕೆ. ಪಟ್ಟಾಭಿ, ಬೆಂಗಳೂರು
◆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ತಂದ ಹೆಣ್ಣು?
ಕುಲಕ್ಕೆ ವಿದ್ಯುತ್ ಬೆಳಕೂ ಆಗಬಹುದು, ಶಾಕೂ ಹೊಡೆಯಬಹುದು.

ಚನ್ನವೀರಪ್ಪ ಬಿದಿರಹಳ್ಳಿ, ಹಿರೇಹಡಗಲಿ
◆ ಪರಿಶುದ್ಧ ರಾಜಕಾರಣಿ ಆಗಬೇಕಾದರೆ ಏನು ಮಾಡಬೇಕು?
'ಕೆಂಟ್ ಶುದ್ಧ ಪಾನಿಯನ್ನೇ ಬಳಸಿ ಸ್ನಾನ ಮಾಡಿ' ಎಂದರಂತೆ ಹೇಮಮಾಲಿನಿ.

ಪಿ. ಜಯವಂತ ಪೈ, ಕುಂದಾಪುರ
◆ ವಿಶ್ವ ಮಹಿಳಾ ದಿನ ಆಚರಿಸುವಂತೆ ಪುರುಷರ ದಿನಾಚರಣೆ ಏಕಿಲ್ಲ?
ಪುರುಷರೇ 'ಪಾರ್ಟಿಗೆ ರಾತ್ರಿ ಆಗಲಿ' ಎಂದುದರಿಂದ ದಿನದ ಆಚರಣೆ ಇಲ್ಲವಂತೆ.

ಹಾಡ್ಯ ಬ. ಜಯಾನಂದ, ಮೈಸೂರು
◆ ನಂಬಿ ಕೆಟ್ಟವರಿಲ್ಲ ಎಂದರು ದಾಸರು. ಈಗಿನ ನಾಯಕರನ್ನು ನಂಬಿದರೆ?
ನಾವೂ ದಾಸರಾಗುತ್ತೇವೆ worry ದಾಸರು.

ಬಿ. ಚಂದ್ರೇಗೌಡ, ಬೆಂಗಳೂರು
◆ ಸಂಗೀತದ ಸರಿಗಮಕ್ಕೂ, ಸಂಸಾರದ ಸರಿಗಮಕ್ಕೂ ಏನು ವ್ಯತ್ಯಾಸ?
ಅಲ್ಲಿ ಆಲಾಪ ಹೆಚ್ಚು, ಇಲ್ಲಿ ಪ್ರಲಾಪ ಹೆಚ್ಚು.

## ಬಹುಮಾನಿತ ಪ್ರಶ್ನೆ

ರಾಮಕೃಷ್ಣ ರೆಡ್ಡಿ, ಬೆಂಗಳೂರು
◆ ಕೋಳಿಗಳನ್ನು ಸಾಕುತ್ತೇವೆ. ಗುಬ್ಬಚ್ಚಿಗಳನ್ನೇಕೆ ಸಾಕುವುದಿಲ್ಲ?
ಕೊ ಕೊ ಕೋ ಕೋ ಎನ್ನುತ್ತಾ ಮುಂದಾಗಿ ವಂಶವೇ ಬಲಿಯಾಗುವುದಲ್ಲ; ಬಲಿಯಾಗದ ಜೀವಿಗೆ ಬೆಲೆಯಿಲ್ಲ.

ಆರತಿ ಘಟಿಕಾರ್, ಬೆಂಗಳೂರು
◆ ಒಂದು ದಿನದ ಮಟ್ಟಿಗೆ ಎಲ್ಲಾ ಸುದ್ದಿವಾಹಿನಿಗಳು ತಮ್ಮ ಪ್ರಸಾರ ನಿಲ್ಲಿಸಿದರೆ ಏನಾಗಬಹುದು?
'ಸೋಫಾಸುಂದರಿ'ಯರು 'ಈ ಮೌನವ ತಾಳೆನು, ಟೈಮ್ ಕಳೆವ ದಾರಿಯ ಕಾಣೆನು; ಓ ಚಾನಲ್' ಎಂದು ಗೋಗರೆಯಬಹುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
◆ ಕಳ್ಳಬೆಕ್ಕನ್ನು ಮನೆಯೊಳಗೆ, ನಿಯತ್ತಿನ ನಾಯಿಯನ್ನು ಮನೆಯ ಹೊರಗೆ ಇಟ್ಟಿರುವುದೇಕೆ?



ಕಳ್ಳರನ್ನು ಸಚಿವಾಲಯದಲ್ಲಿ, ಯೋಧರನ್ನು ಗಡಿಯಲ್ಲಿ ಇಡುವ ಪಾರ್ಲಿಮೆಂಟ್ ನಿಯಮ.

ಪಿ.ಎನ್. ಶ್ರೀವತ್ಸ, ಬೆಂಗಳೂರು
◆ ಇತ್ತೀಚೆಗೆ ಎಂಜಿನ್ ಇಲ್ಲದೆ ಓಡಿದ ರೈಲುಬಂಡಿ ಎರಡನೇ ದಿನಕ್ಕೇ ಕೈ ಕೊಟ್ಟುಬಿಟ್ಟಿತಲ್ಲಾ...?
ತಪ್ಪು ತಿಳಿದಿದ್ದೀರಿ. ಅದು ಕೈಗೆ ಟಿಕೆಟ್ ಕೊಟ್ಟು ಎರಡನೇ ಬಾರಿ ಪ್ರಧಾನಿ ಆಯಿತು.

ದೇವೇಂದ್ರ, ಕಡೂರು
◆ ಬಹುಪಾಲು ನದಿಗಳಿಗೆ ಹೆಣ್ಣುಮಕ್ಕಳ ಹೆಸರಿರುವುದಕ್ಕೆ ಏನಾದರೂ ವಿಶೇಷ ಕಾರಣವಿದೆಯೆ?
ಒಂದಲ್ಲ, ಹಲವು. ಬಳುಕು, ನಿನಾದ, ಕಣ್ಣಿಗೆ ತಂಪಾಗಿಸುವ ಗುಣ, ದಡ ಮೀರದ ಸಂಯಮ...

■ ರಾಮ್